

ಶಿ ಝೆಂಗ್ಲಿ ಚೀನಾದ ‘ಬಾವಲಿ ಹೆಣ್ಣು’ ಎಂದೇ ಪ್ರಸಿದ್ಧರಾದವರು. ದಶಕಗಳ ಕಾಲ ಕಾಡುಮೇಡುಗಳನ್ನು ಅಲೆದು, ಗುಹೆಗಹ್ವರಗಳಲ್ಲಿನ ಬಾವಲಿಗಳ ಬೆನ್ನು ಬಿದ್ದಿರುವ ಈ ಸಂಶೋಧಕಿ ಸಾರ್ಸ್–ಕೊರೊನಾ ವೈರಸ್‌ಗಳ ಜಗತ್ತನ್ನೇ ಜಾಲಾಡಿದ್ದಾರೆ. ಬಾವಲಿಗಳ ಬೆನ್ನು ಬಿದ್ದು ವೈರಸ್‌ಗಳ ಕುರಿತಂತೆ ಆಕೆ ನಡೆಸಿರುವ ಸಂಶೋಧನೆಗಳು, ವಿಶ್ವಕ್ಕೆ ಹೊಸ ಬೆಳಕಿಂಡಿಯನ್ನು ತೆರೆದಿವೆ. ಪ್ರಸಕ್ತ ಜಗತ್ತನ್ನು ಕಂಗೆಡಿಸಿರುವ ಕೊರೊನಾ ವೈರಾಣುಗಳ ಬಗೆಗೆ ಜಗತ್ತಿಗೆ ಹೆಚ್ಚಿನ ವಿಷಯ ತಿಳಿಯುವಲ್ಲಿಯೂ ಝೆಂಗ್ಲಿ ಅವರ ಸಾಧನೆಯಿದೆ.